


## ಸಮುದ್ರ ಮಥನ




### ಹಳಿ ತಪ್ಪಿದ ಚಳವಳಿಯ ಮಾಹಿತಿ

ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ರಾಮದೇವ್ ನಡೆಸುತ್ತಿದ್ದ ಚಳವಳಿ ಹೇಗೆ ಹಳಿ ತಪ್ಪಿತು ಎನ್ನುವುದನ್ನು ಎನ್.ವಿಶಾಖ ವಿಶದವಾಗಿ ವಿವರಿಸಿದ್ದಾರೆ.

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಕೆ.ರಾಧಾಕೃಷ್ಣ ಬಾಯಿರಿ, ಕುಂದಾಪುರ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ, ಪಿ.ಎ. ಸುಧೀಂದ್ರ, ಬೆಂಗಳೂರು

### ಸಣ್ಣ ತಪ್ಪಿಗೆ ಖಳನಾಯಕ!

ದೇಶಕ್ಕೆ ಒಳ್ಳೆಯದಾಗಲಿ ಎಂದು ಹೋರಾಡುವ ಬಾಬಾ ರಾಮದೇವ್ ಅವರ ಒಂದು ಸಣ್ಣ ತಪ್ಪಿಗಾಗಿ ಖಳನಾಯಕನಂತೆ ವರ್ಣಿಸಿದ್ದೀರಿ.

-ವೈ.ಎಂ.ಚಂದ್ರಶೇಖರ, ಸಿದ್ದಾಪುರ

### ಪಾಪ!

ಕರ್ನಾಟಕದವರೆ ಆದ ನಿತ್ಯಾನಂದ ಸ್ವಾಮೀಜಿಯನ್ನು ಬಿಟ್ಟದ್ದೇಕೆ? ಬೇರೆಯವರು ಮಾಡದ 'ಪಾಪ'ವನ್ನು ಅವರೇನು ಮಾಡಿದ್ದರು? -ಸಿಪಿಕೆ, ಮೈಸೂರು

### ಪಾಪಿ ಚಿರಾಯು!

ಬಾಬಾಗಳು ತಮ್ಮ ಮಾತು, ತಂತ್ರಗಾರಿಕೆಯಿಂದ ಜನ ಸಾಮಾನ್ಯರಿಗೆ ಎಲ್ಲವನ್ನೂ ತೊರೆಯಿರಿ ಎಂದು ಭೋಧಿಸಿ, ಅವರಿಂದ ಕಾಣಿಕೆ ಪಡೆದು, ಇಹದ ಎಲ್ಲ ವೈಭೋಗಗಳನ್ನು ಅನುಭವಿಸುತ್ತಾರೆ. ಅವರ ನಿಜ ಬಣ್ಣ ಬಯಲಾದ ಬಳಿಕ ಮಾಯವಾಗುತ್ತಾರೆ! ಅಷ್ಟು ಹೊತ್ತಿಗೆ ಮತ್ತೊಬ್ಬ ಬಾಬಾ ಹುಟ್ಟಿಕೊಳ್ಳುತ್ತಾನೆ! ಒಟ್ಟಿನಲ್ಲಿ ಪಾಪಿ ಚಿರಾಯು...! -ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಹುಸೇನ್ ವಿಶ್ವ ಕಲಾವಿದ

ಪೇಂಟಿಂಗ್ ಕಲಾವಿದರಾಗಿ ವಿಶ್ವಮಟ್ಟದಲ್ಲಿ ದೊಡ್ಡ ಹೆಸರು ಮಾಡಿರುವ ಎಂ. ಎಫ್. ಹುಸೇನ್ ಬಗ್ಗೆ ದಿಲಾವರ್ ರಾಮದುರ್ಗ ಅವರ ಲೇಖನ ಅಪರೂಪದ ಮಾಹಿತಿ ನೀಡಿತು. ಬರಹ ಆಪ್ತವಾಗಿತ್ತು.

-ಎಚ್.ಎಸ್. ವಿಶ್ವನಾಥ್, ಶಿವಮೊಗ್ಗ/ ವೆಂಕಟೇಶ ಪ್ರಸಾದ್, ಎಲ್.ಶಿವಲಿಂಗಪ್ಪ, ಬೆಂಗಳೂರು

### ಪಲಾಯನವಾದ

ಇಸ್ಲಾಂನಲ್ಲಿ ಅಮೂರ್ತ ಕಲ್ಪನೆಯ ಭಕ್ತಿ ಇರುವುದರಿಂದ ದೇವಿ ಸರಸ್ವತಿಯಂತೆ ಮೂರ್ತ ರೂಪದಲ್ಲಿ ಕ್ಯಾನ್ವಾಸಿಗಿಳಿಸುವ ಪ್ರಯತ್ನಕ್ಕೆ ಹುಸೇನ್ ಕೈಹಾಕಲಾರರು ಎಂಬ ಪಲಾಯನವಾದ ಒಪ್ಪತಕ್ಕದ್ದಲ್ಲ. -ಎಂ.ಪಿ.ಬದರಿನಾಥ್, ಬೆಂಗಳೂರು

### ಎಲ್ಲ ಹಳ್ಳಿಗಳ ಕಥೆ

ಉಪಕಾರ ಸ್ಮರಣೆ ಇರದ ಮನುಷ್ಯನ ಹೀನ ವ್ಯಕ್ತಿತ್ವವನ್ನು ಬಿ.ಎಲ್.ವೇಣು ಅವರ 'ಲಾಳಾಸಾಬಿಯೂ... ಕುರುಡಿಹಳ್ಳಿಯೂ...' ಕಥೆ ಚೆನ್ನಾಗಿ ಕಟ್ಟಿಕೊಟ್ಟಿದೆ.

-ಸೂರಗೊಂಡನಹಳ್ಳಿ ಜಿ. ಶರಣಪ್ಪ, ಬೆಂಗಳೂರು/ ಕೊಹಿಮ, ಬಸರಕೋಡು, ಕೆ.ಎ.ಸೌಮ್ಯ, ಮೈಸೂರು, ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ/

### ಉಪಯುಕ್ತ ಮಾಹಿತಿ

ಅರ್ಮೇನಿಯಾಕ್ಕೆ ಒಮ್ಮೆಯಾದರೂ ಭೇಟಿ ನೀಡುವ ಆಸೆ ಹುಟ್ಟಿಸುವಂತೆ ಡಾ. ನಿವೇದಿತಾ ತಮ್ಮ ಪ್ರವಾಸ ಲೇಖನದಲ್ಲಿ ಸಾಕಷ್ಟು ಮಾಹಿತಿ ನೀಡಿದ್ದಾರೆ.

-ಬಾ.ರಂ.ಸುರೇಶ್, ಶಿವಮೊಗ್ಗ

### ಯಾವುದು ಸರಿ?

ಅರ್ಮೇನಿಯಾ ರಾಜಧಾನಿ ಜನಸಂಖ್ಯೆ 14 ಲಕ್ಷ ಎಂದು ಒಂದು ಕಡೆ, 20 ಲಕ್ಷ ಎಂದು ಮತ್ತೊಂದು ಕಡೆ ಡಾ.ನಿವೇದಿತಾ ತಪ್ಪಾಗಿ ಬರೆದಿದ್ದಾರೆ.

-ಎಂ.ರಮೇಶ ಅಡಿಗ, ಮಣಿಪಾಲ

### ಚಿತ್ರ ಬೇರೆಯವರದು!

ಜೂನ್ 16 'ಸುಧಾ' ಸಂಚಿಕೆಯ ಸೆಲೆಬ್ರಿಟಿಯಲ್ಲಿ ಟೆನಿಸ್ ತಾರೆ ಲಿ ನಾ ಬಗ್ಗೆ ಬರೆದಿದ್ದೀರಿ. ಆದರೆ ಅದರಲ್ಲಿ ಪ್ರಕಟಿಸಿದ ಚಿತ್ರ ಟೆನಿಸ್ ತಾರೆ ದಿನಾರಾ ಸಫಿನಾ ಅವರದು.

-ಬಿ.ಎಫ್. ಪಾಟೀಲ, ಹುಬ್ಬಳ್ಳಿ


ಲಿ ನಾ

ಹೌದು ತಪ್ಪಾಗಿದೆ. -ಸಂ.